**ಪ್ರಧಾನ ದಿವಾನಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.**

**ಉಪಸ್ಥಿತರುಃ ಶ್ರೀ. ಸತೀಶ ಕೆ.ಜಿ**

ಬಿ.ಎ., ಎಲ್.ಎಲ್ ಬಿ.,

ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,

ನಂಜನಗೂಡು.

ದಿನಾಂಕಃ 20 ನೇ ಫೆಬ್ರವರಿ, 2026

**ಮೂಲ ದಾವೆ ಸಂಖ್ಯೆ 475/2025**

**ವಾದಿಃ** ಶ್ರೀ.ಹೆಚ್. ಸಿ. ಮರಿಸ್ವಾಮಿ ಬಿನ್ ಲೇಟ್ ಚಿನ್ನಸ್ವಾಮಿ,
ವಯಸ್ಸು ಸುಮಾರು 56 ವರ್ಷ,
ವಾಸಃ ಹಗಿನವಾಳು ಗ್ರಾಮ, ಹುಲ್ಲಹಳ್ಳಿ ಹೋಬಳಿ,
ನಂಜನಗೂಡು ತಾಲ್ಲೂಕು.

**(ಪ್ರತಿನಿಧಿಸುವವರು ಶ್ರೀ.ಹೆಚ್.ಎನ್. ಮಹದೇವಸ್ವಾಮಿ, ವಕೀಲರು)**

**// ವಿರುದ್ಧ //**

**ಪ್ರತಿವಾದಿಗಳುಃ**

1) ಶ್ರೀ.ನಾಗರಾಜು ಬಿನ್ ಲೇಟ್ ಚಿನ್ನಸ್ವಾಮಿ
ವಯಸ್ಸು ಸುಮಾರು 32 ವರ್ಷ,

2) ಶ್ರೀ.ಗಣೇಶ ಬಿನ್ ಲೇಟ್ ಹೆಚ್.ಕೆ. ಮಹದೇವಯ್ಯ
ವಯಸ್ಸು ಸುಮಾರು 42 ವರ್ಷ,

3) ಶ್ರೀ.ಶಿವರಾಜು ಬಿನ್ ಲೇಟ್ ಹೆಚ್.ಕೆ. ಮಹದೇವಯ್ಯ
ವಯಸ್ಸು ಸುಮಾರು 40 ವರ್ಷ,

4) ಶ್ರೀ.ದೇವರಾಜು ಬಿನ್ ಲೇಟ್ ಚಿಕ್ಕಂಡಯ್ಯ
ವಯಸ್ಸು ಸುಮಾರು 70 ವರ್ಷ,

5) ಶ್ರೀ.ಚಿನ್ನಸ್ವಾಮಿ ಬಿನ್ ಲೇಟ್ ಚಿಕ್ಕಂಡಯ್ಯ
ವಯಸ್ಸು ಸುಮಾರು 45 ವರ್ಷ,

6) ಶ್ರೀಮತಿ.ಸುಮ ಬಿನ್ ಲೇಟ್ ಚಿಕ್ಕಂಡಯ್ಯ
ವಯಸ್ಸು ಸುಮಾರು 40 ವರ್ಷ,

7) ಶ್ರೀ.ಪ್ರಕಾಶ ಬಿನ್ ಲೇಟ್ ಚಿಕ್ಕಂಡಯ್ಯ
ವಯಸ್ಸು ಸುಮಾರು 35 ವರ್ಷ,

8) ಶ್ರೀ.ಒಣಕಾರ ಬಿನ್ ಲೇಟ್ ಚಿಕ್ಕಂಡಯ್ಯ
ವಯಸ್ಸು ಸುಮಾರು 50 ವರ್ಷ,

9) ಶ್ರೀ.ಮಂಜು ಬಿನ್ ಲೇಟ್ ಚಿಕ್ಕಂಡಯ್ಯ
ವಯಸ್ಸು ಸುಮಾರು 40 ವರ್ಷ,
ಎಲ್ಲರ ವಾಸಃ ಹಗಿನವಾಳು ಗ್ರಾಮ,
ಹುಲ್ಲಹಳ್ಳಿ ಹೋಬಳಿ, ನಂಜನಗೂಡು ತಾಲ್ಲೂಕು.

**(ಪ್ರತಿನಿಧಿಸುವವರು ಶ್ರೀ.ಹೆಚ್.ಎಂ. ಚಿಕ್ಕಣ್ಣ, ವಕೀಲರು)**

**ಮಧ್ಯಕಾಲೀನ ಅರ್ಜಿ ಸಂಖ್ಯೆ –1 ರ ಪಕ್ಷಗಾರರು**

**ಅರ್ಜಿದಾರರು/ವಾದಿ:** ಶ್ರೀ.ಹೆಚ್.ಸಿ. ಮರಿಸ್ವಾಮಿ

**// ವಿರುದ್ಧ //**

**ಎದುರುದಾರರು/ಪ್ರತಿವಾದಿಗಳುಃ** ಶ್ರೀ.ನಾಗರಾಜು ಮತ್ತು ಇತರರು

| | |
|---|---|
| ಯಾವ ಕಾಯಿದೆಯಡಿಯಲ್ಲಿ ಮಧ್ಯಕಾಲೀನ ಅರ್ಜಿಯನ್ನು ಸಲ್ಲಿಸಲಾಗಿದೆ. | ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 |
| ಯಾವ ಪರಿಹಾರ ಕೋರಿ ಸಲ್ಲಿಸಲಾಗಿದೆ | ತಾತ್ಕಾಲಿಕ ನಿರ್ಬಂಧಕಾಜ್ಞೆ ಕೋರಿ |
| ಮಧ್ಯಕಾಲೀನ ಅರ್ಜಿ ಸಂಖ್ಯೆ–1 ನ್ನು ಸಲ್ಲಿಸಿದ ದಿನಾಂಕ | 16.09.2025 |
| ಮಧ್ಯಕಾಲೀನ ಅರ್ಜಿ ಸಂಖ್ಯೆ | IA.No.1 |
| 6 ನೇ ಎದುರುದಾರ ಮಧ್ಯಕಾಲೀನ ಅರ್ಜಿಗೆ ತಕರಾರು ಸಲ್ಲಿಸಿದ ದಿನಾಂಕ | 6 ನೇ ಪ್ರತಿವಾದಿ ದಿನಾಂಕ 06.02.2026 ರಂದು ಲಿಖಿತ ಹೇಳಿಕೆಯ ಜೊತೆಗೆ ಜ್ಞಾಪನ ಪತ್ರ ಸಲ್ಲಿಸಿ ಲಿಖಿತ ಹೇಳಿಕೆಯ ಅಂಶಗಳನ್ನೇ ಮಧ್ಯಕಾಲೀನ ಅರ್ಜಿ ಸಂಖ್ಯೆ-1 ಕ್ಕೆ ತಕರಾರು ಎಂದು ಪರಿಗಣಿಸಬೇಕೆಂದು ಕೋರಿರುತ್ತಾರೆ. |
| ಮಧ್ಯಕಾಲೀನ ಅರ್ಜಿ ಸಂಖ್ಯೆ–1 ರ ಮೇಲೆ ಆದೇಶ ಮಾಡಿದ ದಿನಾಂಕ | 20.02.2026 |

## ಮಧ್ಯಕಾಲೀನ ಅರ್ಜಿ ಸಂಖ್ಯೆ-1 ರ ಮೇಲೆ ಆದೇಶ

ವಾದಿ ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಈ ದಾವೆ ಸಲ್ಲಿಸಿದ್ದು, ವಾದಪತ್ರದ ಜೊತೆ ಮಧ್ಯಕಾಲಿನ ಅರ್ಜಿ ಸಂಖ್ಯೆ:1 ನ್ನು ಸಲ್ಲಿಸಿ, ಪ್ರತಿವಾದಿಗಳಾಗಲೀ, ಅವರ ಪರವಾಗಿ ಪ್ರತಿನಿಧಿಸುವ ಪ್ರತಿನಿಧಿಗಳಾಗಲೀ ಯಾರೂ ಸಹ ದಾವಾ ತಪಶೀಲು ಸ್ವತ್ತಿನಲ್ಲಿ ಬೆಳೆದಿರುವ ಜೋಳ ಮತ್ತು ಟೊಮೊಟೊ ಫಸಲನ್ನು ಕಟಾವು ಮಾಡಲು ಅರ್ಜಿದಾರರಿಗೆ ತೊಂದರೆ ನೀಡದಂತೆ ಪ್ರತಿವಾದಿಗಳ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡಬೇಕೆಂದು ಕೇಳಿಕೊಂಡಿರುತ್ತಾರೆ. ಮಧ್ಯಕಾಲೀನ ಅರ್ಜಿ ಸಂಖ್ಯೆ-1 ರ ಜೊತೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ವಾದಿ ಹೇಳುವುದೇನೆಂದರೆ, ವಾದಿ ದಾವಾ ತಪಶೀಲು ಸ್ವತ್ತನ್ನು ಖರೀದಿಸಿದ ನಂತರ ಖಾತೆ ಬದಲಾವಣೆಗಾಗಿ ತಹಶೀಲ್ದಾರ್ ರವರ ಸಮಕ್ಷಮ ದಾಖಲೆಗಳನ್ನು ಹಾಜರುಪಡಿಸಿ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ. ತದನಂತರ ಪ್ರತಿವಾದಿಗಳ ತಂದೆ ಮತ್ತು 4 ನೇ ಪ್ರತಿವಾದಿ ತನ್ನ ಹೆಸರಿಗೆ ಬದಲಾವಣೆಯಾಗಿರುವ ಖಾತೆಯ ಬಗ್ಗೆ ತಕರಾರು ಮಾಡಿದ್ದು, ನಂತರ ಈ ಬಗ್ಗೆ ಆರ್.ಆರ್.ಟಿ.ಪ್ರಕರಣ ಸಂಖ್ಯೆ -149/2011-12 ರಂತೆ ಪ್ರಕರಣ ನಡೆದು ನಂಜನಗೂಡು ತಹಶೀಲ್ದಾರ್ ರವರು ದಾಖಲೆಗಳನ್ನು ಪರಿಶೀಲಿಸಿ ಪ್ರತಿವಾದಿಗಳ ತಂದೆ ಸಲ್ಲಿಸಿದ್ದ ತಕರಾರನ್ನು ತಿರಸ್ಕರಿಸಿ ತನ್ನ ಹೆಸರಿಗೆ ಖಾತೆ ಮಾಡಲು ಆದೇಶ ಮಾಡಿರುತ್ತಾರೆ. ಪ್ರತಿವಾದಿಗಳ ತಂದೆ ಮತ್ತು 4 ನೇ ಪ್ರತಿವಾದಿ ಸದರಿ ಆದೇಶದ ವಿರುದ್ಧ ಮೈಸೂರಿನ ಉಪ-ವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ಆರ್.ಎ.334/2023 ರಂತೆ ಮೇಲ್ಮನವಿ ಸಲ್ಲಿಸಿದ್ದು, ಉಪವಿಭಾಗಾಧಿಕಾರಿಗಳು ದಿನಾಂಕ 10.02.2020 ರಂದು ಸದರಿ ಮೇಲ್ಮನವಿಯನ್ನು ಕೂಡ ವಜಾ ಮಾಡಿರುತ್ತಾರೆ. ವಾದಿ ಮುಂದುವರಿದು ಹೇಳುವುದೇನೆಂದರೆ, ಪ್ರತಿವಾದಿಗಳ ತಂದೆ ಮತ್ತು 4 ನೇ ಪ್ರತಿವಾದಿ ಮೂಲ ದಾವಾ ಸಂಖ್ಯೆ-410/2015 ರಂತೆ ಹಕ್ಕು ಸೌಮ್ಯ ಕೋರಿ ಹಾಗು ಶಾಶ್ವತ ನಿರ್ಬಂಧಕಾಜ್ಞೆ ಕೋರಿ

ದಾವೆ ಸಲ್ಲಿಸಿದ್ದು, ಸದರಿ ದಾವೆ ವಜಾ ಆಗಿರುತ್ತದೆ. ಈ ಮೇಲೆ ಹೇಳಿದ ದಾವೆಯಲ್ಲಿ ಪ್ರತಿವಾದಿಗಳು ಮಧ್ಯಕಾಲೀನ ಆದೇಶಕ್ಕಾಗಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯೂ ಕೂಡ ವಜಾ ಆಗಿರುತ್ತದೆ. ಸದರಿ ಆದೇಶದ ವಿರುದ್ಧ ಪ್ರತಿವಾದಿಗಳ ತಂದೆ ಎಂ.ಎ.14/2016 ರಂತೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯೂ ಕೂಡ ವಜಾ ಆಗಿರುತ್ತದೆ. ತಾನು ದಾವಾ ಸ್ವತ್ತಿನ ಮಾಲೀಕತ್ವವನ್ನು ಹೊಂದಿದ ನಂತರ ದಾವಾ ಸ್ವತ್ತಿನಲ್ಲಿ ಜೋಳ, ಟೊಮೊಟೊ ಮುಂತಾದ ಬೆಳೆಗಳನ್ನು ಬೆಳೆದಿರುತ್ತೇನೆ. ಈ ಎಲ್ಲಾ ಅಂಶಗಳು ತಾನು ದಾವಾ ಸ್ವತ್ತಿನ ಮಾಲೀಕನಾಗಿ ಸ್ವಾಧೀನದಲ್ಲಿರುತ್ತೇನೆಂಬುದು ಮೇಲ್ನೋಟಕ್ಕೆ ತೋರಿಸುತ್ತವೆ. ಪ್ರತಿವಾದಿಗಳು ತನ್ನ ಸ್ವಾಧೀನಕ್ಕೆ ತೊಂದರೆ ಕೊಡುತ್ತಾ ತಾನು ಬೆಳೆದಿರುವ ಬೆಳೆಯನ್ನು ಕಟಾವು ಮಾಡಲು ತೊಂದರೆ ಕೊಡುತ್ತಿದ್ದು, ದಿನಾಂಕ 18.08.2025 ರಂದು ಪ್ರತಿವಾದಿಗಳು ಮತ್ತು ಅವರ ಸಹಚರರು ದಾವಾ ಸ್ವತ್ತಿನ ಸ್ವಾಧೀನಕ್ಕೆ ಅತಿಕ್ರಮಿಸಲು ಪ್ರಯತ್ನಿಸಿದ್ದು ತಾನು ಅವರ ಅತಿಕ್ರಮ ಪ್ರವೇಶವನ್ನು ತಡೆದಿರುತ್ತೇನೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳಿಗೆ ಯಾವುದೇ ಹಕ್ಕು, ಹಿತಾಸಕ್ತಿಯಿಲ್ಲದಿದ್ದರು ತನ್ನ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದರಿಂದ ದಿನಾಂಕ 22.08.2025 ರಂದು ಅಧಿಕಾರ ವ್ಯಾಪ್ತಿವುಳ್ಳ ಪೊಲೀಸ್ ಠಾಣೆಗೆ ದೂರು ದಾಖಲಿಸಿರುತ್ತೇನೆ, ಆದರೆ ಪೊಲೀಸರು ತನಗೆ ಯಾವುದೇ ರಕ್ಷಣೆ ಕೊಟ್ಟಿರುವುದಿಲ್ಲ. ಆದ್ದರಿಂದ ಅನ್ಯಮಾರ್ಗವಿಲ್ಲದೆ ಈ ದಾವೆ ಸಲ್ಲಿಸಿರುವುದಾಗಿ ಹೇಳಿದ್ದು, ವಾದಿ ತನ್ನ ಪ್ರಮಾಣ ಪತ್ರದಲ್ಲಿ ಒಂದು ವೇಳೆ ಮಧ್ಯಕಾಲಿನ ಅರ್ಜಿ ಸಂಖ್ಯೆ:1 ನ್ನು ಪುರಸ್ಕರಿಸಿದರೆ ಪ್ರತಿವಾದಿಗಳಿಗೆ ಯಾವುದೇ ರೀತಿ ತೊಂದರೆಯಾಗುವುದಿಲ್ಲ ಮತ್ತು ಸದರಿ ಅರ್ಜಿಯನ್ನು ಪುರಸ್ಕರಿಸದೇ ಇದ್ದರೆ ತನಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಆದ್ದರಿಂದ ಮಧ್ಯಕಾಲಿನ ಅರ್ಜಿ ಸಂಖ್ಯೆ: 1 ನ್ನು ಪುರಸ್ಕರಿಸುವಂತೆ ಕೇಳಿಕೊಂಡಿರುತ್ತಾರೆ.

2. 1, 2, 4, 5, 7 ರಿಂದ 9 ನೇ ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಹಾಜರಾಗಿದ್ದು ಯಾವುದೇ ಲಿಖಿತ ಹೇಳಿಕೆ ಸಲ್ಲಿಸಿರುವುದಿಲ್ಲ. 6 ನೇ ಪ್ರತಿವಾದಿ ತನ್ನ ವಕೀಲರ ಮೂಲಕ ಹಾಜರಾಗಿ ಲಿಖಿತ ಹೇಳಿಕೆಯ ಜೊತೆಗೆ ಒಂದು ಜ್ಞಾಪನವನ್ನು ಸಲ್ಲಿಸಿ ಲಿಖಿತ ಹೇಳಿಕೆಯ ಅಂಶಗಳನ್ನೇ ಮಧ್ಯಕಾಲೀನ ಅರ್ಜಿ ಸಂಖ್ಯೆ-1 ಕ್ಕೆ ತಕರಾರನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿರುತ್ತಾರೆ. ವಾದಿ ಸಲ್ಲಿಸಿರುವ ದಾವೆ ಕಾನೂನು ದೃಷ್ಟಿಯಿಂದಾಗಲೀ ಅಥವಾ ವಾಸ್ತವಾಂಶದಿಂದಾಗಲೀ ಊರ್ಜಿತವಾಗತಕ್ಕದ್ದಲ್ಲ. 6 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ವಾದಿ ಸುಳ್ಳು ಕ್ರಯಪತ್ರದ ಆಧಾರದ ಮೇಲೆ ಸ್ವಾಧೀನದಲ್ಲಿರುತ್ತೇನೆಂದು ಸುಳ್ಳು ಮಾಹಿತಿ ನೀಡಿ ಪ್ರತಿವಾದಿಗಳ ಭೌತಿಕ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಾರೆ. ಪ್ರತಿವಾದಿಗಳು ತುಂಬಾ ಮೃದು ಸ್ವಭಾವದವರಾಗಿದ್ದು, ಇವರಿಗೆ ಯಾವುದೇ ಜನರ ಸಹಾಯವಾಗಲಿ ಅಥವಾ ಹಣಕಾಸಿನ ಸಹಾಯವಾಗಲಿ ಇರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಗೆ ಯಾವುದೇ ಹಕ್ಕು, ಅಧಿಕಾರವಿರುವುದಿಲ್ಲದ್ದರಿಂದ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

3. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು. ಈ ನ್ಯಾಯಾಲಯದ ಅವಗಾಹನೆಗೆ ಕೆಳಕಂಡ ಅಂಶಗಳು ಮೂಡಿಬಂದಿರುತ್ತವೆಃ-

1. ಈ ದಾವೆಯಲ್ಲಿ ಮಧ್ಯಕಾಲೀನ ಅರ್ಜಿ ಸಂಖ್ಯೆ:1 ರಲ್ಲಿ ಕೇಳಿರುವಂತೆ ವಾದಿ ತನ್ನ ಪರವಾಗಿ ಮೇಲ್ನೋಟಕ್ಕೆ ಪ್ರಕರಣವಿದೆ ಎಂದು ರುಜುವಾತುಪಡಿಸುವರೇ?
2. ಅನುಕೂಲತೆಯ ತಕ್ಕಡಿ ತನ್ನ ಪರವಾಗಿರುತ್ತದೆಂದು ವಾದಿ ರುಜುವಾತುಪಡಿಸುವರೇ?

3. ಒಂದು ವೇಳೆ ಮಧ್ಯಕಾಲೀನ ಅರ್ಜಿ ಸಂಖ್ಯೆ:1 ನ್ನು ಪುರಸ್ಕರಿಸದೇ ಇದ್ದಲ್ಲಿ ವಾದಿಗೆ ತುಂಬಲಾರದ ನಷ್ಟವಾಗುತ್ತದೆಂದು ರುಜುವಾತುಪಡಿಸುವರೇ?

4. ಯಾವ ಆದೇಶ?

4. ಈ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಃ–

ಅಂಶ 1 ರಿಂದ 3: ಸಕಾರಾತ್ಮಕವಾಗಿ

ಅಂಶ :4 : ಅಂತಿಮ ಆದೇಶದ ಪ್ರಕಾರ:–

## ಕಾರಣಗಳು

5. **ಅಂಶ 1 ರಿಂದ 3:–** ಈ ಮೂರು ಅಂಶಗಳು ಒಂದಕ್ಕೊಂದು ಅಂತರ್ಗತವಾಗಿದ್ದು ವಸ್ತು ಸಂಗತಿ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಮೂರು ಅಂಶಗಳನ್ನು ಒಟ್ಟಿಗೆ ಗಣನೆಗೆ ತೆಗೆದುಕೊಳ್ಳಲಾಗಿದೆ.

6. ತಾತ್ಕಾಲಿಕ ನಿರ್ಬಂಧಕಾಜ್ಞೆಯ ಮಂಜೂರಾತಿಗೆ ಸಂಬಂಧಿಸಿದಂತೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಮಾರ್ಗದರ್ಶಿ ತತ್ವವನ್ನು "**Seema Arshad Zaheer and Others v Municipal Corporation of Greater Mumbai and Others**, (2006) 5 SCC 282, ಎಂದು ವರದಿಯಾಗಿರುವ ತೀರ್ಪಿನಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡುವ ಸಂದರ್ಭದಲ್ಲಿ ಪರಿಗಣಿಸಬಹುದಾದ ಅಂಶಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಅಭಿಪ್ರಾಯಪಟ್ಟಿರುತ್ತದೆಃ–

> "30. The discretion of the Court is exercised to grant a temporary injunction only when the following requirements are made out by the plaintiff;
> (i) existence of a prima-facie case as pleaded, necessitating protection of the plaintiff's rights by issue of a temporary injunction;

(ii) when the need for protection of the plaintiffs rights is compared with or weighed against the need for protection of the defendants rights or likely infringement of the defendant's rights, the balance of convenience tilting in favour of the plaintiff; and

(iii) clear possibility of irreparable injury being caused to the plaintiff if the temporary injunction is not granted. In addition, temporary injunction being an equitable relief, the discretion to grant such relief will be exercised only when the plaintiffs' conduct is free from blame and he approaches the Court with clean hands."

7. ತಾತ್ಕಾಲಿಕ ನಿರ್ಬಂಧಕಾಜ್ಞೆ ಹೊರಡಿಸುವುದು ನ್ಯಾಯಾಲಯದ ವಿವೇಚನೆಗೆ ಒಳಪಟ್ಟಿರುತ್ತದೆ. ಒಂದು ವೇಳೆ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಸದರಿ ದಾಖಲಾತಿಗಳು ಧನಾತ್ಮಕವಾಗಿ ಕಂಡುಬಂದಾಗ ನ್ಯಾಯಾಲಯದ ವಿವೇಚನೆಗೆ ಆಧಾರವಾಗುತ್ತದೆ. ಯಾವುದೇ ಅರ್ಜಿದಾರರು ತಾವು ಪಾಲಿಸಬೇಕಾದ ನಿಯಮಗಳನ್ನು ಪಾಲಿಸದಿದ್ದರೆ ಆತನ ಪರವಾಗಿ ಮೌಲ್ಯವು ಕುಂಠಿತವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡುವುದಕ್ಕೆ ಬಾಧಕವಾಗುತ್ತದೆ. ಅದೇ ರೀತಿ ನ್ಯಾಯದಾನ ಮತ್ತು ನ್ಯಾಯಾಲಯದ ಕ್ರಮಗಳನ್ನು ದುರುಪಯೋಗಪಡಿಸಿಕೊಳ್ಳುವುದನ್ನು ತಡೆಯಲು ನ್ಯಾಯಾಲಯವು ಆದೇಶವನ್ನು ಹೊರಡಿಸಲು ಹೊಂದಿರುವ ಅಧಿಕಾರಗಳ ಸಂಬಂಧ ನ್ಯಾಯಾಲಯವು ಕ್ರಮಾದೇಶ 39 ರಡಿಯಲ್ಲಿ ಪರಿಗಣಿಸಲಾಗದ ಸಂದರ್ಭಗಳಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಹೊರಡಿಸಲು ಅಂತರ್ಗತ ಅಧಿಕಾರವನ್ನು ಹೊಂದಿರುತ್ತದೆ. ಅದೇ ರೀತಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವಾಗ ನ್ಯಾಯಾಲಯವು ತಳೆಯಬಹುದಾದ ವಿವೇಚಾನಾಧಿಕಾರವು ಕೇವಲ ಕೆಳಕಂಡ ವಾದಿಯ ಅಗತ್ಯತೆಗಳನ್ನು ಆಧರಿಸುತ್ತದೆ.

(1) ವಾದಿ ಕೋರಿದಂತೆ ಆತನ ಹಕ್ಕುಗಳನ್ನು ಕಾಪಾಡಲು ಅವಶ್ಯಕವಾದ ಮೇಲ್ನೋಟಕ್ಕೆ ಸಾಬೀತುಪಡಿಸಬಹುದಾದ ಅಂಶಗಳು ಅಸ್ತಿತ್ವದಲ್ಲಿ ಇದೆಯೇ ಎಂಬುದನ್ನು ಪರಿಗಣಿಸಬೇಕು,

(2) ವಾದಿ ಮತ್ತು ಪ್ರತಿವಾದಿಯರು ತಮ್ಮ ಹಕ್ಕುಗಳ ರಕ್ಷಣೆಯ ಸಂಬಂಧ ಹೊಂದಿರುವ ಅಂಶಗಳ ತುಲನೆಯಲ್ಲಿ ವಾದಿಯ ಪರ ಹೆಚ್ಚಿನ ಪಾಲು ಇರುವುದು,

(3) ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪ್ರಧಾನ ಮಾಡದಿದ್ದರೆ ವಾದಿಗೆ ತುಂಬಲಾರದ ನಷ್ಟ ಉಂಟಾಗಬಹುದು ಎಂಬ ವಿವೇಚನೆಗಳು ಕಂಡುಬರಬೇಕು. ಇದರೊಂದಿಗೆ ತಾತ್ಕಾಲಿಕ ತಡೆಯಾಜ್ಞೆಯು ಒಂದು ಸಮಾನ ರೀತಿಯ ಪರಿಹಾರವಾಗಿರುವುದರಿಂದ ಅಂತಹ ಪರಿಹಾರವನ್ನು ಪ್ರಧಾನ ಮಾಡುವುದರಲ್ಲಿ ವಿವೇಚಾನಾಧಿಕಾರವನ್ನು ವಾದಿಯು ನ್ಯಾಯಾಲಯವನ್ನು ಯಾವುದೇ ದುರುದ್ದೇಶವಿಲ್ಲದೇ ಶುದ್ಧಹಸ್ತದಿಂದ ಸಂಪರ್ಕಿಸಿದರೆ ಮಾತ್ರ ಚಲಾಯಿಸಬೇಕಾಗುತ್ತದೆ.

8. ಪ್ರಸ್ತುತ ಪ್ರಕರಣದಲ್ಲಿ ವಾದಿ ತನ್ನ ಪರವಾಗಿ ಮೇಲ್ನೋಟಕ್ಕೆ ಪ್ರಕರಣವಿದೆ ಎಂದು ತೋರಿಸಲು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆಃ–

| | |
|---|---|
| 1) | ದಿನಾಂಕ 16.04.2012 ರ ನೋಂದಾಯಿತ ಕ್ರಯಪತ್ರದ ಮೂಲ ಪ್ರತಿ. |
| 2) | ತಹಶೀಲ್ದಾರ್ ರವರು ಮಾಡಿರುವ ಆದೇಶದ ದೃಢೀಕೃತ ಪ್ರತಿ |
| 3) | ಉಪವಿಭಾಗಾಧಿಕಾರಿಗಳು ಮಾಡಿರುವ ಆದೇಶದ ದೃಢೀಕೃತ ಪ್ರತಿ |
| 4) | ಗಣಕೀಕೃತ ಪಹಣಿ ಮತ್ತು ಮ್ಯುಟೇಷನ್ ಪ್ರತಿಗಳು |

| | |
|---|---|
| 5) | ಕಂದಾಯ ಪಾವತಿ ರಶೀದಿ |
| 6) | ಪಟ್ಟಾ ಮತ್ತು ರಶೀದಿ ಪುಸ್ತಕ |
| 7) | ಮೂಲ ದಾವೆ ಸಂಖ್ಯೆ-410/2015 ರಲ್ಲಿ ಮಧ್ಯಕಾಲೀನ ಅರ್ಜಿ ಸಂಖ್ಯೆ-1 ರ ಮೇಲಿನ ಆದೇಶದ ದೃಢೀಕೃತ ಪ್ರತಿ |
| 8) | MA.14/2016 ರಲ್ಲಾದ ಆದೇಶದ ದೃಢೀಕೃತ ಪ್ರತಿ |
| 9) | ಛಾಯಾಚಿತ್ರಗಳು ಮತ್ತು ಸಿಡಿ |
| 10) | ಪೊಲೀಸ್‌ನವರು ನೀಡಿರುವ ಸ್ವೀಕೃತಿ |

9. ಪ್ರತಿವಾದಿಗಳು ತಮ್ಮ ಪರವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

10. ಉಭಯ ಪಕ್ಷಕಾರರು ಸಾಧರಪಡಿಸಿರುವ ದಾಖಲೆಗಳು, ವಾದಪತ್ರ, ಲಿಖಿತ ಹೇಳಿಕೆಯನ್ನು ಪರಿಶೀಲಿಸಿದಾಗ, ದಾವಾ ಸ್ವತ್ತಿನ ಅಸ್ತಿತ್ವ ಮತ್ತು ಅದರ ವರ್ಣನೆಯ ಬಗ್ಗೆ ಯಾವುದೇ ವಿವಾದವಿರುವುದಿಲ್ಲ. ವಾದಿಯ ಪ್ರಕಾರ ದಿನಾಂಕ 16.04.2012 ರ ನೋಂದಾಯಿತ ಕ್ರಯಪತ್ರದ ಮೂಲಕ ದಾವಾ ಸ್ವತ್ತನ್ನು ಖರೀದಿಸಿ ಶಾಂತಿಯುತ ಸ್ವಾಧೀನಾನುಭವದಲ್ಲಿದ್ದು, ಪ್ರತಿವಾದಿಗಳಿಗೆ ಯಾವುದೇ ಹಕ್ಕಿಲ್ಲದಿದ್ದರು ತನ್ನ ವ್ಯವಸಾಯದ ಚಟುವಟಿಕೆಗಳಿಗೆ ತೊಂದರೆ ಕೊಡುತ್ತಿದ್ದಾರೆಂಬುದು ವಾದಿಯ ನಿಲುವಾಗಿರುತ್ತದೆ. ವಾದಿ ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲು ಹಾಗು ದಾವಾಸ್ವತ್ತಿನಲ್ಲಿ ಶಾಂತಿಯುತ ಸ್ವಾಧೀನಾನುಭವವನ್ನು ಹೊಂದಿರುತ್ತೇವೆಂದು ತೋರಿಸಲು ಈ ಮೇಲೆ ಉಲ್ಲೇಖಿಸಿದ ದಾಖಲಾತಿಗಳನ್ನು ಹಾಜರುಪಡಿಸಿದ್ದು, ವಾದಿ ಹಾಜರುಪಡಿಸಿರುವ ಪಹಣಿ ಪತ್ರಿಕೆ ಮತ್ತು ಮ್ಯುಟೇಷನ್ ರಿಜಿಸ್ಟರ್ ಪ್ರತಿಗಳನ್ನು ಪರಿಶೀಲಿಸಿದಾಗ ಕಬ್ಜೆ ಅಥವಾ ಸ್ವಾಧೀನದಾರರ ಅಂಕಣ

ಮತ್ತು ವ್ಯವಸಾಯಗಾರರ ಅಂಕಣದಲ್ಲಿ ವಾದಿಯ ಹೆಸರು ದಾಖಲಾಗಿರುವುದು ಕಂಡುಬರುತ್ತದೆ.

11. ಕರ್ನಾಟಕ ಭೂ-ಕಂದಾಯ ಅಧಿನಿಯಮ ಕಲಂ-133 ರ ಪ್ರಕಾರ ಕಂದಾಯ ದಾಖಲೆಗಳಲ್ಲಿ ನಮೂದುಗಳು ವಿರುದ್ಧವಾಗಿ ಸಾಬೀತಾಗುವವರೆಗೆ ಅಥವಾ ಹೊಸ ನಮೂದನ್ನು ಕಾನೂನುಬದ್ಧವಾಗಿ ಬದಲಿಸುವವರೆಗೆ ನಿಜವೆಂದೇ ಭಾವಿಸಲಾಗುತ್ತದೆ. ಈ ಪ್ರಕರಣದಲ್ಲಿ ಪ್ರತಿವಾದಿಗಳು ವಾದಿಯ ಸ್ವಾಧೀನವನ್ನು ಅಲ್ಲಗಳೆದು ಹೇಳುವುದೇನೆಂದರೆ, ಪ್ರತಿವಾದಿಗಳು ಸ್ವಾಧೀನದಲ್ಲಿದ್ದು ಅವರ ಸ್ವತ್ತನ್ನು ಬಲವಂತವಾಗಿ ಕಸಿದುಕೊಳ್ಳುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದು, ಅನುಸೂಚಿತ ಜಾತಿ ಮತ್ತು ಅನುಸೂಚಿದ ಪಂಗಡ ಅಧಿನಿಯಮ ಮತ್ತು ನಿಯಮಗಳನ್ನು ಗಮನಿಸಿ ವಾದಿಯ ವಿರುದ್ಧ ಪ್ರಕರಣ ದಾಖಲಿಸಬೇಕು, ದಾವಾ ಸ್ವತ್ತಿನಲ್ಲಿ ವಾದಿ ಯಾವತ್ತೂ ಸ್ವಾಧೀನದಲ್ಲಿಲ್ಲ. ಆದ್ದರಿಂದ ವಾದಿ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ತಮ್ಮ ಲಿಖಿತ ವಾದಮಂಡನೆಯಲ್ಲಿ ಹೇಳಿರುತ್ತಾರೆ. ಪ್ರತಿವಾದಿಗಳು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಪ್ರತಿವಾದಿಗಳು ತೆಗೆದುಕೊಂಡಿರುವ ನಿಲುವನ್ನು ಪರಿಶೀಲಿಸಿದಾಗ ತಮ್ಮ ನಿಲುವಿಗೆ ಪೂರಕವಾದ ಮತ್ತು ಪುಷ್ಟೀಕರಿಸುವ ದಾಖಲೆಯನ್ನು ಹಾಜರುಪಡಿಸಿಲ್ಲವಾದ್ದರಿಂದ ಮತ್ತು ವಾದಿ ತನ್ನ ನಿಲುವಿಗೆ ಪೂರಕವಾದ ಹಾಗು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವುದಾಗಿ ಪುಷ್ಟೀಕರಿಸುವ ದಾಖಲೆಗಳನ್ನು ಹಾಜರುಪಡಿಸಿರುವುದರಿಂದ ಯಾವುದೇ ದಾಖಲೆ ಅಥವಾ ಪುರಾವೆಗಳಿಲ್ಲದೆ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತೇನೆಂದು ಪ್ರತಿಪಾದಿಸುತ್ತಿರುವ ಪ್ರತಿವಾದಿಗಳ ನಿಲುವನ್ನು ಪರಿಗಣಿಸಲಾಗುವುದಿಲ್ಲ ಮತ್ತು ಉಭಯ ಪಕ್ಷಕಾರರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದಾವಾ ಸ್ವತ್ತಿನಲ್ಲಿ ವಾದಿಯೇ ಸ್ವಾಧೀನದಲ್ಲಿರುವುದು

ಮೇಲ್ನೋಟಕ್ಕೆ ಕಂಡುಬರುತ್ತದೆ. ಯಾವುದೇ ಒಬ್ಬ ವ್ಯಕ್ತಿ ಸ್ಥಿರಾಸ್ತಿಯಲ್ಲಿ ಸ್ವಾಧೀನದಲ್ಲಿರುತ್ತೇನೆಂದು ಹೇಳಬೇಕಾದರೆ ಅದಕ್ಕೆ ಪೂರಕವಾದ ದಾಖಲೆಗಳನ್ನು ಹಾಜರುಪಡಿಸಬೇಕಾಗುತ್ತದೆ. ಒಂದು ವೇಳೆ ಅಂತಹ ಪೂರಕ ದಾಖಲೆಗಳನ್ನು ಹಾಜರುಪಡಿಸದಿದ್ದಾಗ ಅವರ ನಿಲುವನ್ನು ಪರಿಗಣಿಸಲಾಗುವುದಿಲ್ಲ. ಈ ಪ್ರಕರಣದಲ್ಲಿ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತೇವೆಂದು ತೋರಿಸಲು ಮೇಲ್ನೋಟಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಕೇವಲ ಲಿಖಿತ ಹೇಳಿಕೆಯನ್ನು ಸಲ್ಲಿಸಿದ ಮಾತ್ರಕ್ಕೆ ಪ್ರತಿವಾದಿಗಳೇ ಸ್ವಾಧೀನದಲ್ಲಿರುತ್ತಾರೆಂದು ಪರಿಗಣಿಸಲಾಗುವುದಿಲ್ಲ.

12. ಈ ಪ್ರಕರಣದಲ್ಲಿ ವಾದಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಕ್ರಯಪತ್ರದ ಆಧಾರದ ಮೇಲೆ ವಾದಿಯ ಹೆಸರಿಗೆ ಕಂದಾಯ ದಾಖಲೆಗಳು ನಮೂದಾಗಿದ್ದು, ಸದರಿ ದಾಖಲೆಗಳಿಗೆ ವ್ಯತಿರಿಕ್ತವಾದಂತಹ ಯಾವುದೇ ದಾಖಲೆಗಳನ್ನು ಪ್ರತಿವಾದಿಗಳು ಹಾಜರುಪಡಿಸಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ವಾದಿಯೇ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಗೋಲ್ಡನ್ ನಿಯಮವಾದ ಅಂಶ-1ನ್ನು ವಾದಿ ರುಜುವಾತು ಪಡಿಸಿರುತ್ತಾರೆಂದೇ ಹೇಳಬೇಕಾಗುತ್ತದೆ.

13. ಗೋಲ್ಡನ್ ನಿಯಮಗಳಾದ 2 ಮತ್ತು 3 ನೇ ಅಂಶಗಳಿಗೆ ಸಂಬಂಧಿಸಿದಂತೆ ಈಗಾಗಲೇ ಚರ್ಚಿಸಿದಂತೆ ದಾವಾ ಸ್ವತ್ತಿನಲ್ಲಿ ವಾದಿಯೇ ಸ್ವಾಧೀನದಲ್ಲಿರುವುದಾಗಿ ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ವಾದಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಪ್ರತಿವಾದಿಗಳು ಈಗಾಗಲೇ ವಾದಿಯ ಹೆಸರಿಗೆ ಆಗಿರುವ ಕಂದಾಯ ದಾಖಲೆಗಳನ್ನು ಪ್ರಶ್ನೆ ಮಾಡಿದ್ದು, ನಂತರ ಪ್ರತಿವಾದಿಗಳ ತಕರಾರನ್ನು ತಿರಸ್ಕರಿಸಿ ಸಕ್ಷಮ ಕಂದಾಯ ಅಧಿಕಾರಿಗಳು ವಾದಿಯ ಹೆಸರಿಗೆ ಖಾತೆ ಬದಲಾವಣೆ ಮಾಡಿರುವುದು

ಮೇಲ್ನೋಟಕ್ಕೆ ಕಂಡುಬರುತ್ತದೆ. ಅದೇ ರೀತಿ ಪ್ರತಿವಾದಿಗಳು ಸಲ್ಲಿಸಿದ್ದ ಮೂಲ ದಾವೆ ಸಂಖ್ಯೆ-410/2015 ರಲ್ಲಿ ಮಧ್ಯಕಾಲೀನ ಅರ್ಜಿಯೂ ಕೂಡ ವಜಾ ಆಗಿದ್ದು, ಸದರಿ ಆದೇಶದ ವಿರುದ್ಧ MA.14/2016 ರಂತೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿ ಕೂಡ ವಜಾ ಆಗಿರುತ್ತದೆ. ಒಟ್ಟಾರೆಯಾಗಿ ವಾದಿ ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ದಾವಾ ಸ್ವತ್ತಿನಲ್ಲಿ ವಾದಿಯೇ ಸ್ವಾಧೀನದಲ್ಲಿರುವುದಾಗಿ ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ದಾವಾ ಸ್ವತ್ತಿನಲ್ಲಿ ಬೆಳೆ ಬೆಳೆದಿರುವುದು ಕಂಡುಬರುತ್ತದೆ. ಆದ್ದರಿಂದ ಈ ಹಂತದಲ್ಲಿ ಪ್ರತಿವಾದಿಗಳಿಗಿಂತ ವಾದಿಯ ಪರವಾಗಿ ಅನುಕೂಲತೆಯ ಸಮತೋಲನವಿರುವುದು ಕಂಡುಬರುತ್ತದೆ. ಒಂದು ವೇಳೆ ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಹಕ್ಕು-ಹಿತಾಸಕ್ತಿ ಇದ್ದರೆ ಕಾನೂನಾತ್ಮಕವಾಗಿ ತಮಗೆ ಬರಬೇಕಾದ ಆಸ್ತಿಯನ್ನು ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ತಮ್ಮ ಹಕ್ಕನ್ನು ನಿರೂಪಿಸಬೇಕಾಗುತ್ತದೆ. ಆದ್ದರಿಂದ ಈ ಹಂತದಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡದಿದ್ದರೆ ಪ್ರತಿವಾದಿಗಳಿಗಿಂತ ವಾದಿಗೆ ಹೆಚ್ಚು ನಷ್ಟವಾಗುವ ಸಾಧ್ಯತೆ ಇರುತ್ತದೆ. ಪ್ರತಿವಾದಿಗಳ ವಾದಕ್ಕೆ ಸಂಬಂಧಿಸಿದಂತೆ ಉಭಯ ಪಕ್ಷಗಾರರ ಮೂಲಕ ಅಥವಾ ಪರವಾಗಿ ಸೇರಿಸಬೇಕಾದ ಸಾಕ್ಷ್ಯವನ್ನು ಪರಿಶೀಲಿಸಿದ ನಂತರವೇ ಪ್ರತಿವಾದಿಗಳ ವಾದವನ್ನು ನಿರ್ಧರಿಸಬೇಕಾಗುತ್ತದೆ. ಆದ್ದರಿಂದ ಅನುಕೂಲತೆಯ ಸಮತೋಲನ ಮತ್ತು ಸರಿಪಡಿಸಲಾಗದ ನಷ್ಟದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪ್ರತಿವಾದಿಗಳಿಗೆ ಹೋಲಿಸಿದರೆ ವಾದಿಯ ಪ್ರಕರಣವು ಉತ್ತಮ ನೆಲೆಯಲ್ಲಿದೆ ಎಂದು ಈ ನ್ಯಾಯಾಲಯ ಕಂಡುಕೊಳ್ಳುತ್ತದೆ. ಈ ಮೇಲೆ ಚರ್ಚಿಸಿದ ತಾರ್ಕಿಕತೆಯ ಬೆಳಕಿನಲ್ಲಿ ವಾದಿ ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2ರ ಮೂರು ಗೋಲ್ಡನ್ ನಿಯಮಗಳನ್ನು ರುಜುವಾತುಪಡಿಸಿರುತ್ತಾರೆಂದು ಈ ನ್ಯಾಯಾಲಯ ಕಂಡುಕೊಳ್ಳುತ್ತದೆ. ಆದ್ದರಿಂದ ಈ ಮೊಕದ್ದಮೆಯು ಬಾಕಿ ಇರುವ

ಸಮಯದಲ್ಲಿ ಕಾನೂನು ಪ್ರಕ್ರಿಯೆಗನುಸಾರವಾಗಿಯಲ್ಲದೆ ವಾದಿ ದಾವಾ ಸ್ವತ್ತಿನಲ್ಲಿ ಬೆಳೆದಿರುವ ಬೆಳೆಗಳನ್ನು ಕಟಾವು ಮಾಡಲು ಹಾಗು ಅವರ ಸ್ವಾಧೀನಕ್ಕೆ ತೊಂದರೆ ಕೊಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವುದು ಸೂಕ್ತವೆಂದು ಈ ನ್ಯಾಯಾಲಯ ಭಾವಿಸುತ್ತದೆ. ಆದ್ದರಿಂದ ಈ ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ನ್ಯಾಯಾಲಯದ ನಿರ್ಣಯಕ್ಕೆ ಬಂದ ಅಂಶ–1 ರಿಂದ 3 ನ್ನು **ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

14. **ಅಂಶಃ–4**: – ಅಂಶ 1 ರಿಂದ 3 ರ ಚರ್ಚೆಯ ಆಧಾರದ ಮೇಲೆ ಈ ಕೆಳಕಂಡಂತೆಃ

**ಆದೇಶ**

ವಾದಿ ಸಲ್ಲಿಸಿರುವ ಮಧ್ಯಕಾಲಿನ ಅರ್ಜಿ ಸಂಖ್ಯೆ:1 ನ್ನು ಪುರಸ್ಕರಿಸಲಾಗಿದೆ.

ಪ್ರತಿವಾದಿಗಳಾಗಲೀ ಮತ್ತು ಅವರ ಪರವಾಗಿ ಪ್ರತಿನಿಧಿಸುವ ಯಾವುದೇ ವ್ಯಕ್ತಿಯಾಗಲೀ ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡದಂತೆ ಮತ್ತು ದಾವಾ ಸ್ವತ್ತಿನಲ್ಲಿ ಬೆಳೆದಿರುವ ಯಾವುದೇ ಬೆಳೆಯನ್ನು ನಾಶಪಡಿಸದಂತೆ ಮತ್ತು ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಯಾವುದೇ ರೀತಿಯಲ್ಲಿ ತೊಂದರೆ ಅಥವಾ ಅಡ್ಡಿಯುಂಟು ಮಾಡದಂತೆ ಈ ದಾವೆ ಮುಗಿಯುವವರೆಗೂ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡಲಾಗಿದೆ.

ಈ ಆದೇಶದಲ್ಲಿ ಯಾವುದೂ ಉಭಯ ಪಕ್ಷಗಾರರ

ನಡುವೆ ಬಾಕಿ ಉಳಿದಿರುವ ಪ್ರಕರಣದ ಅಂತಿಮ ಅರ್ಹತೆಯ ಅಭಿವ್ಯಕ್ತಿ ಎಂದು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

(Before parting with this order, it is clarified that, nothing in this order shall be deemed to be an expression on the final merits of the suit pending between the parties.)

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

(ಆದೇಶವನ್ನು ಶೀಘ್ರಲಿಪಿಗಾರರ ಮೂಲಕ ಬೆರಳಚ್ಚು ಮಾಡಿಸಿದ್ದು, ನಂತರ ಅದನ್ನು ಓದಿ, ತಿದ್ದಿ, ಪರಿಷ್ಕರಿಸಿ, ಈ ದಿನ ಅಂದರೆ ದಿನಾಂಕಃ 20/02/2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

(ಸತೀಶ ಕೆ.ಜಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ನಂಜನಗೂಡು.